ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) :

1. (ಲಕ್ಷ ರೂ.ಗಳಲ್ಲಿ)

ತಾಲ್ಲೂಕು	ವಾರ್ಷಿಕ ಕಿಸ್ತು		
	94-95	95-96	96-97
ಮಡಿಕೇರಿ	149.28	164.40	196.92
ವಿರಾಜಪೇಟೆ	376.80	413.76	720.12
ಸೋಮವಾರಪೇಟೆ	312.00	346.08	516.00
ಒಟ್ಟು	**838.08**	**924.24**	**1433.04**

2. (ಲಕ್ಷ ರೂ.ಗಳಲ್ಲಿ)

ತಾಲ್ಲೂಕು	ವಸೂಲಾದ ರಾಜಸ್ವ		
	94-95	95-96	96-97
ಮಡಿಕೇರಿ	13.20	18.85	19.45
ವಿರಾಜಪೇಟೆ	14.45	21.60	21.80
ಸೋಮವಾರಪೇಟೆ	13.35	21.90	18.90
ಒಟ್ಟು	**41.00**	**62.35**	**60.15**

3.

ತಾಲ್ಲೂಕು	ಸಾರಾಯಿ ಅಂಗಡಿಗಳು	ಸಗಟು ಮದ್ಯ ಮಾರಾಟಗಾರರು	ಮದ್ಯದ ಅಂಗಡಿಗಳು	ಬಾರ್‌ಗಳು
ಮಡಿಕೇರಿ	66	2	23	15
ವಿರಾಜಪೇಟೆ	93	2	40	16
ಸೋಮವಾರಪೇಟೆ	96	2	26	24

ಘಟಪ್ರಭಾ ಬಲದಂಡೆ ಕಾಲುವೆ

2378 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಭಾರಿ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಘಟಪ್ರಭಾ ಬಲದಂಡೆ ಕಾಲುವೆಯ ಉದ್ದಳತೆ ಎಷ್ಟು?

ಅ) *ಈ ಕಾಲುವೆಯ ಕಾಮಗಾರಿ ಕೆಲಸವನ್ನು ಎಷ್ಟು ವರ್ಷಗಳ ಹಿಂದೆ ಪ್ರಾರಂಭಿಸಲಾಗಿದೆ, ಅಂದಾಜು ಹಾಗೂ ಇಲ್ಲಿಯವರೆಗೆ ಆದ ಖರ್ಚಿನ ವಿವರ ನೀಡುವುದು?*

ಇ) *2000 ಇಸ್ವಿಯೊಳಗೆ ಮುಗಿಸುವ ಸದರಿ ಕಾಮಗಾರಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಅನುದಾನ, ಸಿಬ್ಬಂದಿ ಬಗ್ಗೆ ವಿವರ ನೀಡುವುದು)*

ಈ) *ಈ ಬಗ್ಗೆ ಉಳಿದಿರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಉ) *ಬಾದಾಮಿ ತಾಲ್ಲೂಕಿನಲ್ಲಿ ಘಟಪ್ರಭಾ ಬಲದಂಡೆಯಿಂದ ಎಷ್ಟು ಹೆಕ್ಟೇರ್ ಪ್ರದೇಶ ನೀರಾವರಿಗೆ ಒಳಪಡುತ್ತದೆ?*

ಶ್ರೀ ಕೆ. ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :

ಅ) ಘಟಪ್ರಭಾ ಬಲದಂಡೆ ಕಾಲುವೆಯ ಉದ್ದವು 202 ಕಿಮೀ ಹಾಗೂ ಇದರ ಶಾಖಾ ಕಾಲುವೆಗಳಾದ ಸಂಗಮ ಶಾಖಾ ಕಾಲುವೆಯ ಉದ್ದ32 ಕಿಮೀ ಮತ್ತು ಚಿಕ್ಕೋಡಿ ಶಾಖಾ ಕಾಲುವೆಯ ಉದ್ದವು 86 ಕಿಮೀ ಇರುವುದು.

ಆ) ಈ ಕಾಲುವೆಯ ಕೆಲಸವು 1975-76ರಲ್ಲಿ ಪ್ರಾರಂಭವಾಗಿದೆ. ಇದರ ಅಂದಾಜು ಮೊತ್ತವು ರೂ.521.46 ಕೋಟಿಗಳಷ್ಟಿದ್ದು, ಈ ಕೆಲಸಗಳ ಮೇಲೆ ಇಲ್ಲಿಯವರೆಗೆ ರೂ.162.37 ಕೋಟಿಗಳನ್ನು ಖರ್ಚು ಮಾಡಲಾಗಿದೆ.

ಇ) ಈ ಕಾಲುವೆಯ ಕಾಮಗಾರಿಗಳನ್ನು 2000ನೇ ಇಸ್ವಿಯವರೆಗೆ ಪೂರ್ಣಗೊಳಿಸಲು ಬೇಕಾಗುವ ಮೊತ್ತವು ರೂ.359.09 ಕೋಟಿ ಇರುವುದು. ಪ್ರಸಕ್ತ 1997-98ನೇ ಸಾಲಿನಲ್ಲಿ, ಘಟಪ್ರಭಾ ಕಾಮಗಾರಿಗಳಿಗಾಗಿ 17.35 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದೆ. ಹಾಗೂ ಸಿಬ್ಬಂದಿಗಾಗಿ, 13.95 ಕೋಟಿ ರೂ.ಗಳ ಅನುದಾನ ಒದಗಿಸಲಾಗಿದೆ. ಕಾಮಗಾರಿಗಳನ್ನು 2000ನೇ ಇಸ್ವಿಯವರೆಗೆ ಪೂರ್ಣಗೊಳಿಸುವ ಉದ್ದೇಶದಿಂದ, ಮುಂಗಡ ಕ್ರಮ ಕೈಗೊಳ್ಳಲಾಗುತ್ತಿದ್ದು, ಈಗ ಘಟಪ್ರಭಾ ಬಲದಂಡೆ ಕಾಲುವೆಯ ಕಿಮೀ 95ರವರೆಗೆ ಕಾಮಗಾರಿಗಳನ್ನು, ಕೈಗೊಳ್ಳಲಾಗಿದೆ.

ಈ) ಬಾಕಿ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳುವ ಉದ್ದೇಶದಿಂದ ಗದ್ದನಕೇರಿಯಲ್ಲಿ ಒಂದು ಹೊಸ ವಿಭಾಗ ಕಛೇರಿಯನ್ನು ಸ್ಥಾಪಿಸಿದ್ದು, ಘಟಪ್ರಭಾ ಬಲದಂಡೆ ಕಾಲುವೆ ಮುಂದಿನ ಭಾಗದ ಸರ್ವೆ ಹಾಗೂ ಅನ್ವೇಷಣೆಯನ್ನು ಕೈಗೊಳ್ಳಲಾಗುತ್ತಿದೆ.

ಉ) ಘಟಪ್ರಭಾ ಬಲದಂಡೆ ಕಾಲುವೆಯಿಂದ ಬಾದಾಮಿ ತಾಲ್ಲೂಕಿನಲ್ಲಿ 8701 ಹೆಕ್ಟೇರ್ ಪ್ರದೇಶವನ್ನು ನೀರಾವರಿಗೆ ಒಳಪಡಿಸಲು ಉದ್ದೇಶಿಸಿದೆ.